# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2113 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ನಗರದ ರಸ್ತೆಗಳಲ್ಲಿ ಅತಿ ವಾಹನ ಸಂದಣಿ ನಿವಾರಿಸಿ ಸುಗಮ ಸಂಚಾರಕ್ಕೆ ಸಹಾಯ ಮಾಡುವ ಬದಲಾಗಿ ಟ್ರಾಫಿಕ್ ಆರಕ್ಷಕರ ಗುಂಪು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿ ಟ್ರಾಫಿಕ್ ನಿಯಮ ಉಲ್ಲಂಘಿಸಿದ ಪ್ರಕರಣಗಳನ್ನು ದಾಖಲಿಸಲು ಉತ್ಸುಕರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು) | ಬಂದಿರುತ್ತದೆ.<br>ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ<br>• ಸಾರ್ವಜನಿಕರಿಗೆ ತೊಂದರೆ ಆಗದಂತೆ, ನಿಯಮ ಜಾರಿಯಲ್ಲಿ ಪಾರದರ್ಶಕತೆ ತರಲು ಪೂರ್ವ ನಿರ್ಧರಿತ ಕಾರ್ಯ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆ. (ಅನುಬಂಧ- 1&2) ಈ ಪೂರ್ವ ನಿರ್ಧರಿತ ಕಾರ್ಯ ಯೋಜನೆಯನ್ನು ಉಲ್ಲಂಘಿಸಿದ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಸಂಚಾರ ದಟ್ಟಣೆಯನ್ನು ಸರಿಪಡಿಸಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡುವುದು ಸಂಚಾರ ಪೊಲೀಸರ ಮೊದಲ ಆದ್ಯತೆ ಆಗಿರುತ್ತದೆ.<br>• ಸಂಚಾರ ನಿಯಮ ಉಲ್ಲಂಘನೆಗಳನ್ನು ತಡೆಗಟ್ಟಿ ರಸ್ತೆ ಸುರಕ್ಷತೆಯನ್ನು ಹೆಚ್ಚಿಸಿ ಅಪಘಾತಗಳನ್ನು ತಡೆಗಟ್ಟುವುದು ಮತ್ತು ಸಾವು-ನೋವುಗಳನ್ನು ಕಡಿಮೆ ಮಾಡುವುದು ಸಂಚಾರ ಪೊಲೀಸರ ಆದ್ಯ ಕರ್ತವ್ಯವೂ ಆಗಿದೆ.<br>• ವಾಹನ ದಟ್ಟಣೆಯ ಸಮಯದಲ್ಲಿ ನಿಯಮ ಉಲ್ಲಂಘನೆಗಳಿಗೆ ವಾಹನಗಳನ್ನು ತಡೆಗಟ್ಟಬಾರದೆಂದು ಸೂಚನೆ ನೀಡಲಾಗಿದೆ.<br>• ಸಂಪರ್ಕರಹಿತ ನಿಯಮ ಜಾರಿಗೆ ಅಂದರೆ ವಾಹನಗಳನ್ನು ತಡೆಗಟ್ಟದೆ ಉಲ್ಲಂಘನೆಗಳ ಛಾಯಾಚಿತ್ರಗಳನ್ನು ತೆಗೆದು ವಿಶ್ಲೇಷಿಸಿ, ದಂಡ ರಸೀತಿಯನ್ನು ಕಳುಹಿಸುವ ವಿಧಾನಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದರಿಂದ ಸಾರ್ವಜನಿಕರಿಗೆ ಆಗುತ್ತಿದ್ದ ಕಿರಿಕಿರಿಯನ್ನು ತಪ್ಪಿಸಲಾಗಿದೆ. ತಂತ್ರಜ್ಞಾನವನ್ನು ಉಪಯೋಗಿಸಿ ನಿಯಮ ಜಾರಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ.<br>• ಪ್ರವರ್ತನ ಚಟುವಟಿಕೆಗಳ ಸಂಪರ್ಕರಹಿತ ನಿಯಮಜಾರಿ ಸಮಯದಲ್ಲಿ ಎಲ್ಲಿ ಬೇಕಾದರೂ ಬಳಸಲು ಅನುಕೂಲವಾಗುವಂತೆ ಎ.ಎನ್.ಪಿ.ಆರ್ ಕ್ಯಾಮೆರಾವನ್ನು ಪೋರ್ಟಬಲ್ ಟ್ರೈಪಾಡ್, ಬ್ಯಾಟರಿ ಮತ್ತು 4ಜಿ ಮೋಡಮ್‌ನೊಂದಿಗೆ 20 ಸಂಚಾರ ಪೊಲೀಸ್ ಠಾಣೆಗಳಿಗೆ ಹಂಚಿಕೆ ಮಾಡಲಾಗಿದೆ.<br>• ಸಿಗ್ನಲ್ ಜಂಪಿಂಗ್ ಮತ್ತು ಲೇನ್ ಡಿಸಿಪ್ಲೀನ್ ಉಲ್ಲಂಘನೆಗಳನ್ನು ಸ್ವಯಂಚಾಲಿತವಾಗಿ ಗುರುತಿಸುವ ಕ್ಷಮತೆಯನ್ನು ಹೊಂದಿರುವ ಆರ್.ಎಲ್.ವಿ.ಡಿ (Red Light Violation Detection) ಕ್ಯಾಮೆರಾಗಳನ್ನು 10 ಜಂಕ್ಷನ್‌ಗಳಲ್ಲಿ ಅಳವಡಿಸಲಾಗಿದೆ. |
| (ಆ) | ಬೆಂಗಳೂರು ನಗರದಲ್ಲಿ ಟ್ರಾಫಿಕ್ ಸಮಸ್ಯೆಗಳನ್ನು ಸುಧಾರಿಸಲು ಸರ್ಕಾರದ ಕ್ರಮವೇನು ? (ವಿವರ ನೀಡುವುದು) | ಅನುಬಂಧ - 3ರಲ್ಲಿ ತಿಳಿಸಿದೆ. |

**ಹೆಚ್‌ಡಿ 125 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-1

(16)

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಪೊಲೀಸ್ ಆಯುಕ್ತರವರ ಕಛೇರಿ,
ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ,
ದಿನಾಂಕ:03-01-2017

## ಸು ತ್ತೋ ಲೆ – 157

**ವಿಷಯ:- ಸಂಚಾರ ಪೊಲೀಸ್‌ರ ಕಾರ್ಯನಿರ್ವಹಣೆ ಬಗ್ಗೆ ಸೂಚನೆಗಳು**

\- - -

ಸಂಚಾರ ವಿಭಾಗವು ಬೆಂಗಳೂರು ನಗರ ಪೊಲೀಸ್ ವ್ಯವಸ್ಥೆಯ ಪ್ರಮುಖ ಅಂಗವಾಗಿದ್ದು, ಅತ್ಯಂತ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕಾಗಿದ್ದು ಸಂಚಾರ ಸಂಬಂಧಿ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

1. ಸಂಚಾರ ನಿಯಮ ಉಲ್ಲಂಘನೆ ಎಸಗಿರುವುದು ಕಣ್ಣಿಗೆ ಕಂಡುಬಂದಲ್ಲಿ ಮಾತ್ರ ಚಾಲಕ/ಸವಾರರನ್ನು ತಡೆದು ಕಾನೂನು ರೀತ್ಯ ಕ್ರಮ ಕೈಗೊಳ್ಳುವುದು. ಕೇವಲ ದಾಖಲಾತಿಗಳನ್ನು ತಪಾಸಣೆ ಮಾಡುವ ಸಲುವಾಗಿ ವಿನಾಕಾರಣ ವಾಹನ ನಿಲ್ಲಿಸಕೂಡದು. ಇದು ಮದ್ಯಪಾನ ಮಾಡಿ ವಾಹನ ಚಾಲನೆ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ. ಇದರ ಪಾಲನೆ ಕಟ್ಟುನಿಟ್ಟಾಗಿ ಆಗಬೇಕು.

2. ನಗರದ ಹಲವಾರು ಜಂಕ್ಷನ್‌ಗಳಲ್ಲಿ ವಾಹನ ಸವಾರರು ಮೀಡಿಯನ್ ದಾಟಿ ವಿರುದ್ಧ ದಿಕ್ಕಿನ ಸಂಚಾರದ ವಿರುದ್ಧವಾಗಿ ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡುವ ಪ್ರಕರಣಗಳು ಇತ್ತೀಚೆಗೆ ಸಾಮಾನ್ಯವಾಗಿದ್ದು (ಉದಾ: ಎಎಸ್‌ಸಿ ಸೆಂಟರ್‌ನಿಂದ ಆರ್.ಎಂ. ರಸ್ತೆ, ರಿಚ್‌ಮಂಡ್ ವೃತ್ತದಲ್ಲಿ ಬಿ.ಟಿ.ಸಿ ಗಾರ್ಡೇನಿಯಾ ಕಡೆಯಿಂದ ಶಾಂತಿನಗರ ಕಡೆಗೆ ಸಾಗುವ ವಾಹನಗಳು) ಇಂತಹ ಅಪಾಯಕಾರಿ ಅಭ್ಯಾಸವನ್ನು ಅನಿರೀಕ್ಷಿತ ತಪಾಸಣೆಗಳನ್ನು ಹಮ್ಮಿಕೊಂಡು ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳುವ ಮೂಲಕ ತಡೆಗಟ್ಟುವುದು.

3. ಹಲವಾರು ಪ್ರಮುಖ ಸಮಸ್ಯೆಗಳನ್ನು ಪ್ರಾಥಮಿಕ ಹಂತದಲ್ಲಿಯೇ ಗುರುತಿಸಿ ಸರಿಪಡಿಸಿದಲ್ಲಿ ಅವುಗಳಿಂದ ಉಂಟಾಗಬಹುದಾದ ಗುರುತರ ಸಮಸ್ಯೆಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಇದನ್ನು Broken Window Theory ಎಂದು ಕರೆಯಲಾಗುತ್ತದೆ. ಇದರ ಅನ್ವಯತೆ ಸಂಚಾರ ವಿಭಾಗಕ್ಕೆ ಬಹಳ ಅತ್ಯವಶ್ಯಕವಾಗಿದ್ದು ಇದನ್ನು ಪ್ರತಿಯೊಬ್ಬ ಅಧಿಕಾರಿಯು ಸರಿಯಾಗಿ ಅಧ್ಯಯನ ಮಾಡಿ ತಾವುಗಳು ಯಾವ ರೀತಿಯಲ್ಲಿ ಈ ಸಿದ್ಧಾಂತದ ಉಪಯೋಗವನ್ನು ಪಡೆದುಕೊಂಡು ಸಾರ್ವಜನಿಕರು ಮೆಚ್ಚುವ ರೀತಿಯಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗುವುದೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಸಂಚಾರ ವಿಭಾಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ,

- ಸ್ಟಾಪ್‌ಲೈನ್‌ನಿಂದ ಮುಂದೆ ಬರುವ ವಾಹನಗಳನ್ನು ತಡೆಯುವುದು ಹಾಗೂ ಅವರುಗಳು ಆ ರೀತಿ ಬರದಂತೆ ತಿಳಿಹೇಳುವುದು.
- ವೆಲ್ ಆಫ್ ದಿ ಜಂಕ್ಷನ್‌ನಲ್ಲಿ ಒಂದು ದಿಕ್ಕಿನಿಂದ ಬಂದ ವಾಹನಗಳು ಮುಂದೆ ಹೋಗದೆ ಬ್ಲಾಕ್ ಮಾಡುವ ಕ್ರಿಯೆಯನ್ನು ತಡೆಗಟ್ಟುವುದು.
- ವೆಲ್ ಆಫ್ ದಿ ಜಂಕ್ಷನ್ ಯಾವಾಗಲೂ ಮುಕ್ತವಾಗಿರುವಂತೆ ಕ್ರಿಸ್–ಕ್ರಾಸ್ ರಸ್ತೆ ಮಾರ್ಕಿಂಗ್‌ಗಳನ್ನು ಮಾಡುವುದು. ಜಂಕ್ಷನ್ ಗ್ರಿಡ್–ಲಾಕ್ ಆಗದಂತೆ ನೋಡಿಕೊಳ್ಳುವುದು ಮತ್ತು ಇದಕ್ಕೆ ಅನುಗುಣವಾಗಿ ಸಿಗ್ನಲ್ ಲೈಟ್‌ಗಳ ಟೈಮಿಂಗ್ ಅವಧಿಯನ್ನು ವೈಜ್ಞಾನಿಕವಾಗಿ ನಿರ್ಧರಿಸುವುದು.
- ಜೀಬ್ರಾ ಕ್ರಾಸಿಂಗ್‌ಗಳ ಮೇಲೆ ಯಾವುದೇ ರೀತಿಯ ವಾಹನ ನಿಲ್ಲುಗಡೆಯಾಗದಂತೆ ನೋಡಿಕೊಳ್ಳತಕ್ಕದ್ದು. ಜೀಬ್ರಾ ಕ್ರಾಸಿಂಗ್ ಕೇವಲ ಪಾದಚಾರಿಗಳಿಗೆ ಮಾತ್ರ ಮೀಸಲಿಡತಕ್ಕದ್ದು.
- ಸಂಚಾರವು ಕೇವಲ ಒಂದೇ ಕಡೆಯಿಂದ ಮತ್ತೊಂದು ಕಡೆಗೆ ಸತತವಾಗಿ ಹೋಗುವ ಅಥವಾ ಕಳುಹಿಸುವ ಪರಿಪಾಠವನ್ನು ನಿಲ್ಲಿಸಿ ಪಾಕೆಟ್‌ಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲು ಜಂಕ್ಷನ್ ಚಾಲಕಗಳಿಗೆ ತಿಳುವಳಿಕೆ ನೀಡುವುದು.
- ಸಂಚಾರದ ನಿಯಮಗಳ ಬಗ್ಗೆ ಆಗಾಗ್ಗೆ ಜಾಹೀರಾತುಗಳನ್ನು ನೀಡುವುದು, ಎಫ್.ಎಂ ಮುಖಾಂತರ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

4. ಸಾರ್ವಜನಿಕರೊಂದಿಗೆ ಸಂಚಾರ ವಿಭಾಗದ ಅಧಿಕಾರಿಗಳು ಸಾಕಷ್ಟು ಸಂಯಮ ಮತ್ತು ತಾಳ್ಮೆಯಿಂದ ವರ್ತಿಸಬೇಕು. ಆದರೆ ಕಾನೂನು ಜಾರಿ ವೇಳೆಯಲ್ಲಿ ಕಟ್ಟುನಿಟ್ಟಾಗಿ ಆದರೆ ವಿನಯಪೂರ್ವಕವಾಗಿ ಪ್ರಕರಣಗಳನ್ನು ದಾಖಲಿಸಬೇಕು. ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸುವಾಗ ಕನಿಷ್ಟ 2 ಆಲ್ಕೋ ಮೀಟರ್‌ಗಳನ್ನು ಕಾರ್ಯಾಚರಣೆ ವೇಳೆ ಇಟ್ಟುಕೊಂಡಲ್ಲಿ ಸಾರ್ವಜನಿಕರು ಆಲ್ಕೋಮೀಟರ್ ರೀಡಿಂಗ್ ಬಗ್ಗೆ ಅನುಮಾನ ವ್ಯಕ್ತಪಡಿಸಿದಲ್ಲಿ ಮತ್ತೊಂದು ಆಲ್ಕೋಮೀಟರ್‌ನಿಂದ ಪರಿಶೀಲಿಸಲು ಅವಕಾಶ ಕಲ್ಪಿಸಬೇಕು. ಆಲ್ಕೋಮೀಟರ್ ಬಳಕೆಯಲ್ಲಿ ಉಪಯೋಗಿಸುವ ಸ್ಟ್ರಾಗಳನ್ನು ಪ್ಲಾಸ್ಟಿಕ್ ರ್‍ಯಾಪರ್‌ಗಳಿಂದ ತಪಾಸಣೆಗೆ ಒಳಪಡುವ ವ್ಯಕ್ತಿಯೇ ತೆರೆಯುವಂತೆ ಅವಕಾಶ ಮಾಡಿಕೊಡಬೇಕು. ಹೀಗೆ ಮಾಡಿದಲ್ಲಿ ಒಂದೇ ಸ್ಟ್ರಾ ವನ್ನು ಹಲವಾರು ಜನರಿಗೆ ಉಪಯೋಗಿಸುತ್ತಾರೆಂಬ ತಪ್ಪು ಗ್ರಹಿಕೆಯನ್ನು ಸಾರ್ವಜನಿಕರಲ್ಲಿ ನಿವಾರಿಸಬಹುದು.

5. ಬಿ–ಟ್ರ್ಯಾಕ್ ಯೋಜನೆಯು ಬಹಳ ಮಹತ್ವಾಕಾಂಕ್ಷಿಯಾದ ಯೋಜನೆಯಾಗಿದ್ದು ತಾಂತ್ರಿಕ ಪ್ರಬುದ್ಧತೆಯಿಂದ ರಾಷ್ಟ್ರದಲ್ಲಿಯೇ ಮಾದರಿಯಾಗಿ ಸಂಚಾರ ನಿರ್ವಹಣೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದು ಕೆಲವೊಂದು ಲೋಪದೋಷಗಳನ್ನು ಸರಿಪಡಿಸಿಕೊಂಡಲ್ಲಿ ಉತ್ತಮವಾಗಿ ಸೇವೆಯನ್ನು ನೀಡುವಲ್ಲಿ ಸಹಕಾರಿಯಾಗಲಿದ್ದು:-

    - ವಿಐಪಿ ರವರುಗಳ ಮೂವ್‌ಮೆಂಟ್‌ಗಳನ್ನು, ತುರ್ತು ಸೇವಾ ವಾಹನಗಳ ಸಂಚರಣೆ ಸಮಯದಲ್ಲಿ, ವಿಷಮ (Crisis) ಪರಿಸ್ಥಿತಿ ನಿಭಾಯಿಸುವ ಸಮಯವನ್ನು ಹೊರತುಪಡಿಸಿ ಬೇರೆ ಸಮಯದಲ್ಲಿ ವಿನಾಕಾರಣ ಆಟೋಮೋಡ್‌ನಲ್ಲಿರುವ ಸಿಗ್ನಲ್‌ಗಳನ್ನು ಟ್ಯಾಂಪರ್ ಮಾಡಿ ಮ್ಯಾನ್ಯುಯಲ್ ಮೋಡ್‌ನಲ್ಲಿ ಆಪರೇಟ್ ಮಾಡುವುದನ್ನು ಈ ತಕ್ಷಣದಿಂದ ನಿಲ್ಲಿಸಬೇಕು.

- ಜಂಕ್ಷನ್ ಜಾಗಗಳು / ಹೋಂಗಾರ್ಡ್‌ಗಳು ಮ್ಯಾನ್ಯುಯಲ್ ಮೋಡ್‌ನಲ್ಲಿ ಒಂದೇ ದಿಕ್ಕಿನ ವಾಹನಗಳನ್ನು ಕ್ಲಿಯರ್ ಮಾಡುತ್ತಿರುವುದರಿಂದ ಮುಂದಿನ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಿ ಗ್ರಿಡ್-ಲಾಕ್ ಆಗುವುದಕ್ಕೆ ಪ್ರಮುಖ ಕಾರಣವಾಗುತ್ತದೆ ಎಂಬ ಅಂಶವನ್ನು ಎಲ್ಲರೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು

- ಸಿಗ್ನಲ್ ಸೈಕಲ್ ಟೈಮಿಂಗ್‌ಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಮಾನ್ಯವಾಗಿ 180 ಸೆಕೆಂಡ್‌ಗಳಿಗೆ ಸೀಮಿತವಾಗಿದ್ದು, ಬೆಂಗಳೂರು ನಗರವನ್ನು ಗಮನದಲ್ಲಿಟ್ಟುಕೊಂಡು ಗರಿಷ್ಠ 240 ಸೆಕೆಂಡ್‌ಗಳ ಸಿಗ್ನಲ್ ಸೈಕಲ್ ಟೈಮಿಂಗ್ ಅನ್ನು ಅಳವಡಿಸತಕ್ಕದ್ದು. ಆದಾಗ್ಯೂ ಕೆಲವೊಂದು ಜಂಕ್ಷನ್‌ಗಳಲ್ಲಿ ಸುಮಾರು 5 ನಿಮಿಷಕ್ಕಿಂತಲೂ ಹೆಚ್ಚು ಟೈಮಿಂಗ್ ನೀಡಲಾಗಿದ್ದು ಸಂಬಂಧಪಟ್ಟ ಇನ್ಸ್‌ಪೆಕ್ಟರ್‌ಗಳು ಇವುಗಳನ್ನು ಪರಿಶೀಲಿಸಿ ಸರಿಪಡಿಸಲು ಕ್ರಮ ಕೈಗೊಳ್ಳುವುದು.

- ಈ ಹಿಂದೆ ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳಲ್ಲಿ ಅವ್ಯಾಹತವಾಗಿ ಎಲ್ಲೆಂದರಲ್ಲಿ ವಾಹನಗಳ ತಪ್ಪು ನಿಲುಗಡೆಯಾಗುತ್ತಿದ್ದು ಸಾಮಾನ್ಯವಾಗಿ ದ್ವಿಚಕ್ರ ವಾಹನಗಳನ್ನು ಮಾತ್ರ ಟೋ ಮಾಡಲಾಗುತ್ತಿದ್ದು ಈಗ ಕಾರುಗಳನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಟೋ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯೆಂದು ತಿಳಿಸಿ ಕ್ಯಾಬ್‌ಗಳು ಬೆಂಗಳೂರು ನಗರದ ಪ್ರಮುಖ ರಸ್ತೆಗಳಲ್ಲಿ ನಿಲುಗಡೆ ಮಾಡುತ್ತಿದ್ದು ಸಂಚಾರಕ್ಕೆ ಬಹಳ ಅಡ್ಡಿ ಉಂಟು ಮಾಡುತ್ತಿರುವ ಹಿನ್ನೆಲೆಯಲ್ಲಿ ಇವುಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತಪ್ಪು ನಿಲುಗಡೆಯನ್ನು ತಪ್ಪಿಸಬೇಕು.

- ಕೆಲವು ಪಾರ್ಕಿಂಗ್ ಪ್ರದೇಶಗಳು ವಾಹನಗಳ ನಿಲುಗಡೆ ಇಲ್ಲದೆ ಇದ್ದು ಅಂತಹ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಬಿ.ಎಂ.ಟಿ.ಸಿ ವತಿಯಿಂದ ಅಥವಾ ಖಾಸಗಿ ಮಾಲ್‌ಗಳಲ್ಲಿ ನಿಲುಗಡೆ ಜಾಗ ಲಭ್ಯವಿದ್ದಲ್ಲಿ ಉಗ್ರ ಕ್ರಮ ಕೈಗೊಂಡು ಕಡ್ಡಾಯವಾಗಿ ವಾಹನಗಳು ಪಾರ್ಕಿಂಗ್ ಲಾಟ್‌ನಲ್ಲಿಯೇ ನಿಲುಗಡೆಯಾಗುವಂತೆ ನೋಡಿಕೊಳ್ಳುವುದು.

- ಪೊಲೀಸ್ ಕರ್ತವ್ಯ ನಿರ್ವಹಿಸುವ ಸಮವಸ್ತ್ರಧಾರಿಗಳು ಸಂಚಾರ ನಿಯಮವನ್ನು ಉಲ್ಲಂಘಿಸುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ನಿಯಮ ಉಲ್ಲಂಘಿಸುವ ಸಿಬ್ಬಂದಿಗೆ ಸ್ಥಳದಲ್ಲಿಯೇ ದಂಡ ಕಟ್ಟಿಸಿಕೊಳ್ಳಬೇಕು. ಅವರಿಗೆ ಪೊಲೀಸ್ ನೋಟೀಸ್ ನೀಡುವ ಆವಶ್ಯಕತೆ ಇರುವುದಿಲ್ಲ. ಸಂಚಾರ ವಿಭಾಗದ ಅಧಿಕಾರಿ ಸಿಬ್ಬಂದಿಗಳು ನಿಯಮ ಉಲ್ಲಂಘನೆ ಮಾಡದಂತೆ ಇತರರಿಗೆ ಮಾದರಿಯಾಗಿ ಇರುವಂತೆ ನೋಡಿಕೊಳ್ಳುವುದು.

೬. ನಗರದ ಹಲವಾರು ಪ್ರಮುಖ ರಸ್ತೆಗಳಲ್ಲಿ ಫ್ಲೈಓವರ್‌ಗಳು ನಿರ್ಮಾಣವಾಗಿದ್ದು ಇಲ್ಲಿ ಸಂಚಾರವು ಸುಗಮವಾಗಿ ಸಾಗುತ್ತಿದ್ದು ಸರಹದ್ದಿನ ಅಧಿಕಾರಿಗಳು ಫ್ಲೈಓವರ್ ಕೆಳಗಡೆ ಉದ್ಭವಗೊಂಡಿರುವ ಸಂಚಾರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು.

7. ಕಾನೂನು ಜಾರಿ ಸಮಯದಲ್ಲಿ ಸಾರ್ವಜನಿಕರೊಂದಿಗೆ/ಉಲ್ಲಂಘನೆದಾರರೊಂದಿಗೆ ಸಂಘರ್ಷಕ್ಕೆ ಇಳಿಯದೆ ಕಾನೂನು ಬದ್ಧವಾಗಿರುವ ಕ್ರಮವನ್ನು ಕೈಗೊಳ್ಳಬೇಕು. ಮತ್ತು ಸಂಚಾರ ವಿಭಾಗದ ಅಧಿಕಾರಿ ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ಒಳ್ಳೆಯ ನಡವಳಿಕೆಯಿಂದ ನಡೆದುಕೊಳ್ಳಬೇಕು. ಅವಾಚ್ಯ ಶಬ್ದಗಳನ್ನು ಉಪಯೋಗಿಸದಂತೆ ಎಚ್ಚರಿಕೆ ವಹಿಸಬೇಕು. ಈ ಬಗ್ಗೆ ಅಧೀನ ಸಿಬ್ಬಂದಿಯವರಿಗೂ ಸಹ ಮನವರಿಕೆ ಮಾಡಿಕೊಡಬೇಕು.

8. ಬಿ–ಟ್ರ್ಯಾಕ್ ಯೋಜನೆ ಅಡಿಯಲ್ಲಿ ಸಾರ್ವಜನಿಕರಲ್ಲಿ ಸಂಚಾರ ನಿಯಮಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಹಮ್ಮಿಕೊಳ್ಳಬೇಕು ಹಾಗೂ ದಿನಪತ್ರಿಕೆಗಳಲ್ಲೂ ಸಹ ಸಾಕಷ್ಟು ಪ್ರಚಾರ ನೀಡಲು ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಡಿಸಿಪಿ ಸಂಚಾರ ಪೂರ್ವ ರವರು ಹೋರ್ಡಿಂಗ್ಸ್‌ಗಳ ವಿನ್ಯಾಸವನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

9. ರಸ್ತೆಯಲ್ಲಿ ಗಾಯಗೊಂಡ ಅಥವಾ ಅಪಘಾತ ಪ್ರಕರಣಗಳಲ್ಲಿ ಸಿಲುಕಿಕೊಂಡ ವ್ಯಕ್ತಿಗಳ ನೆರವಿಗೆ ಧಾವಿಸುವವರ (Good Samaritans) ರಕ್ಷಣೆಯ ಬಗ್ಗೆ ಪರಮಾನಂದ್ ಕಟಾರ V/s ಭಾರತ ಸರ್ಕಾರ ಪ್ರಕರಣದಲ್ಲಿ ಘನ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಮಾರ್ಗಸೂತ್ರಗಳನ್ನು ತಪ್ಪದೇ ಅನುಸರಿಸುವುದು ಹಾಗೂ ಈ ಬಗ್ಗೆ ಅಧೀನ ಸಿಬ್ಬಂದಿಯವರಿಗೂ ಸಹ ಅರಿವು ಮೂಡಿಸುವುದಲ್ಲದೆ ಸಾರ್ವಜನಿಕರಿಗೆ ತಿಳಿಯುವಂತೆ ವ್ಯಾಪಕ ಪ್ರಚುರಪಡಿಸಬೇಕು.

10. ಠಾಣಾಧಿಕಾರಿಗಳು ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಹಾಗೆ ಮಾಡಬಾರದು? ಹೀಗೆ ಮಾಡಬಾರದು? ಎಂದು ಹೇಳುತ್ತಾರೆಯೇ ವಿನ: ಏನು ಮಾಡಬೇಕು? ಹೇಗೆ ಮಾಡಬೇಕು? ಎಂಬುದರ ಬಗ್ಗೆ ಮಾರ್ಗದರ್ಶನ ನೀಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಠಾಣಾಧಿಕಾರಿಗಳು ಮತ್ತು ಮೇಲ್ವಿಚಾರಣಾ ಅಧಿಕಾರಿಗಳು ನಿರಂತರವಾಗಿ ಕೆಲಸಕಾರ್ಯಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬೇಕು.

11. ಸಾರ್ವಜನಿಕರಿಂದ ಸಾಮಾನ್ಯವಾಗಿ ಕೇಳಿಬರುವ ದೂರು ಎಂದರೆ ಸಂಚಾರ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿಯವರು ಹೆಚ್ಚಾಗಿ ರಸ್ತೆ ಮೇಲೆ ಕಂಡುಬರುವುದಿಲ್ಲ. ಆದ್ದರಿಂದ ಈ ಅಭಿಪ್ರಾಯವನ್ನು ಹೋಗಲಾಡಿಸಲು ಅಧಿಕಾರಿ ಸಿಬ್ಬಂದಿಯವರು ಹೆಚ್ಚು ಹೆಚ್ಚಾಗಿ ತಮ್ಮನ್ನು ಸಂಚಾರ ನಿರ್ವಹಣೆ ಮತ್ತು ನಿಯಂತ್ರಣಾ ಕರ್ತವ್ಯದಲ್ಲಿ ತೊಡಗಿಸಿಕೊಂಡು ಕರ್ತವ್ಯ ನಿರ್ವಹಿಸುವುದು.

12. ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಕರ್ತವ್ಯದಲ್ಲಿ ಉದಾಸೀನತೆ, ಬೇಜವಾಬ್ದಾರಿ ತೋರಿದಲ್ಲಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

13. ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುವ ವೇಳೆಯಲ್ಲಿ ತಮ್ಮ ಸುರಕ್ಷತೆಯ ದೃಷ್ಟಿಯಿಂದ ಸೂರ್ಯಾಸ್ತದ ನಂತರ reflective jacket ಅನ್ನು ಕಡ್ಡಾಯವಾಗಿ ಧರಿಸತಕ್ಕದ್ದು. ಠಾಣಾಧಿಕಾರಿಗಳು ಈ ಬಗ್ಗೆ ಸೂಕ್ತ ನಿಗಾ ವಹಿಸತಕ್ಕದ್ದು.

ಸುಗಮ ಸಂಚಾರ ಹಾಗೂ ಸಾರ್ವಜನಿಕರ ಸುರಕ್ಷತೆ ಆದ್ಯತೆಗಳಾಗಿದ್ದು ಮುಂದಿನ 6 ತಿಂಗಳಲ್ಲಿ ಈಗಾಗಲೇ ನೀಡಿರುವ ಸರಳ ಮತ್ತು ಪರಿಣಾಮಕಾರಿ ನಿರ್ದೇಶನಗಳನ್ನು ಯಶಸ್ವಿಯಾಗಿ ಜಾರಿಗೆ ತರುವಲ್ಲಿ ಎಲ್ಲರೂ ಶ್ರಮಿಸತಕ್ಕದ್ದು.

(ಪ್ರವೀಣ್ ಸೂದ್)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.
3/11/17

ಗೆ,

ಎಲ್ಲಾ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳಿಗೆ

<u>ಪ್ರತಿಗಳನ್ನು ಮಾಹಿತಿಗಾಗಿ:</u>

1. ಸಂಚಾರ ಉಪ ವಿಭಾಗಗಳ ಎಲ್ಲಾ ಸಹಾಯಕ ಪೊಲೀಸ್ ಆಯುಕ್ತರುಗಳಿಗೆ.
2. ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ, ಪಶ್ಚಿಮ & ಉತ್ತರ ವಿಭಾಗ, ಬೆಂಗಳೂರು ನಗರ.

<u>ಪ್ರತಿಯನ್ನು ಅಭಿನಂದನೆಗಳೊಂದಿಗೆ:</u> ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಮಾಹಿತಿಗಾಗಿ.

ಅನುಬಂಧ-

(11)

ಬೆಂಗಳೂರು ನಗರ
ಸಂಚಾರ ಪೊಲೀಸ್

ಜಂಟಿ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ ವಿಭಾಗ, ನಂ.4, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ,
ದಿನಾಂಕ: 16ನೇ ಫೆಬ್ರವರಿ, 2022.

## <u>ಸುತ್ತೋಲೆ – 169</u>

ವಿಷಯ:- ಬೆಂಗಳೂರು ನಗರ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ನಿಯಮ ಜಾರಿ ವೇಳೆ ಅನುಸರಿಸಬೇಕಾದ ಗುಣಮಟ್ಟದ ಕಾರ್ಯ ನಿರ್ವಹಣಾ ವಿಧಾನಗಳು – (Standard Operating Procedure - SOP)

---

<u>ಪ್ರಾಸ್ತಾವಿಕ</u>

ಸಾರ್ವಜನಿಕ ಸೇವೆಗಾಗಿ ಸದಾ ಕರ್ತವ್ಯ ತತ್ಪರತೆಯಿಂದ ಕಾರ್ಯ ನಿರ್ವಹಿಸುತ್ತಾ ಇಲಾಖೆಯ ಹೆಮ್ಮೆ ಮತ್ತು ಘನತೆ ಗೌರವಗಳನ್ನು ಕಾಪಾಡುವ ಮುಖ್ಯ ಹೊಣೆ ಸಂಚಾರ ಪೊಲೀಸರ ಮೇಲಿದೆ. ರಸ್ತೆಗಳಲ್ಲಿ ಸುಗಮ ಸಂಚಾರ ನಿರ್ವಹಿಸುವುದರ ಜೊತೆಗೆ ಸಾರ್ವಜನಿಕರು ಅಪಘಾತಕ್ಕೆ ಒಳಗಾಗದಂತೆ ಕೈಗೊಳ್ಳುವ ಅನೇಕ ಕ್ರಮಗಳಲ್ಲಿ ರಸ್ತೆ ಸುರಕ್ಷತೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರ ಜೊತೆಗೆ ಸಂಚಾರ ನಿಯಮಗಳನ್ನು ಜಾರಿ ಮಾಡುವುದರ ಮುಖೇನ ರಸ್ತೆಗಳನ್ನು ಸುರಕ್ಷತಾ ವಲಯಗಳನ್ನಾಗಿ ಪರಿವರ್ತಿಸುವ ಗುರುತರ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ. ಸಾರ್ವಜನಿಕರಿಗೆ ತಕ್ಷಣಕ್ಕೆ ಗೋಚರವಾಗುವ ಸರ್ಕಾರದ ಪ್ರಮುಖ ಅಂಗಗಳಲ್ಲಿ ಸಂಚಾರ ಪೊಲೀಸ್ ವಿಭಾಗವು ಅತ್ಯಂತ ಪ್ರಮುಖವಾದದ್ದು ಎಂಬುದನ್ನು ನಾವು ಮರೆಯಬಾರದು. ನಮ್ಮ ಪ್ರತಿಯೊಂದು ಚಟುವಟಿಕೆಗಳು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಪ್ರಸಾರಗೊಳ್ಳುವುದರಿಂದ ನಾವುಗಳು ಜವಾಬ್ದಾರಿಯುತವಾಗಿ ವರ್ತಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಆದ್ಯತೆಯನ್ನು ಪಡೆದುಕೊಳ್ಳುವುದು ಅನಿವಾರ್ಯವಾಗಿದೆ.

ಬಹಳಷ್ಟು ಹಿರಿಯ ಅಧಿಕಾರಿಗಳು, ಮಾಧ್ಯಮದವರು ಹಾಗೂ ಸಾರ್ವಜನಿಕರು ಬೆಂಗಳೂರು ನಗರ ಸಂಚಾರ ಪೊಲೀಸ್ ಅಧಿಕಾರಿ ಸಿಬ್ಬಂದಿಯವರು ರಸ್ತೆಗಳಲ್ಲಿ ಎಲ್ಲೆಂದರಲ್ಲಿ ನಿಂತು ನಿಯಮ ಜಾರಿಗಾಗಿ ಅಡ್ಡಾದಿಡ್ಡಿಯಾಗಿ ಕಾರ್ಯಾಚರಣೆಯಲ್ಲಿ ತೊಡಗುವ ಪರಿಯ ಬಗ್ಗೆ ವ್ಯಾಪಕವಾಗಿ ಟೀಕೆಗಳನ್ನು ಮಾಡುತ್ತಾರೆ. ಒಟ್ಟೊಟ್ಟಿಗೆ 5–6 ಜನ ಗುಂಪಿನಲ್ಲಿ ನಿಂತು ವಾಹನಗಳ ತಪಾಸಣೆ ಇತ್ಯಾದಿಗಳನ್ನು ಮಾಡುತ್ತಾ ಅನಾವಶ್ಯಕವಾಗಿ ಇತರೆ ಸಾರ್ವಜನಿಕರಿಗೂ ಸಹ ತೊಂದರೆ ನೀಡುವ ಪರಿಪಾಠದ ಬಗ್ಗೆ ಹಲವಾರು ದೂರುಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಕಾನೂನು ಜಾರಿ ಮಾಡುವಾಗ ಕೈಗೊಳ್ಳಬೇಕಾದ ಗುಣಮಟ್ಟದ ಕಾರ್ಯ ನಿರ್ವಹಣಾ ಕ್ರಮಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

<u>ಗುಣಮಟ್ಟದ ಕಾರ್ಯ ನಿರ್ವಹಣಾ ಕ್ರಮಗಳು:</u>

1. ಠಾಣಾಧಿಕಾರಿಗಳು ಪಿಎಸ್‌ಐ/ಎಎಸ್‌ಐ ರವರಿಗೆ ಒಂದು ಸಂಚಾರ ಬೀಟ್ ನಿಗದಿಪಡಿಸಬೇಕು.
2. ಬೀಟ್‌ಗೆ ನೇಮಕಗೊಂಡ ಅಧಿಕಾರಿಗಳು ಅವರಿಗೆ ನಿಯೋಜಿಸಿರುವ ಸಂಚಾರ ಬೀಟ್ ಸ್ಥಳದಲ್ಲಿಯೇ ದಂಡ ವಿಧಿಸಬೇಕು.

3. ದಂಡ ವಿಧಿಸುವಾಗ ಪಾರದರ್ಶಕತೆ ವ್ಯವಸ್ಥೆಗಾಗಿ, Bodyworn Camera ವನ್ನು ಕಡ್ಡಾಯವಾಗಿ ಧರಿಸುವುದು.
4. ಅಧಿಕಾರಿಗಳು ನಿರ್ದಿಷ್ಟ ಸ್ಥಳದಲ್ಲಿ ಪ್ರಕರಣ ದಾಖಲಿಸುವ ಮೊದಲು ನಿಸ್ತಂತು ಕೋಣೆಗೆ ಮಾಹಿತಿ ನೀಡಬೇಕು.
5. ಅಧಿಕಾರಿಗಳು ವಾಹನಗಳನ್ನು ನಿಲ್ಲಿಸುವಾಗ ವಿನಾಕಾರಣ ಮಧ್ಯರಸ್ತೆಯಲ್ಲಿ ಓಡಿಹೋಗಿ ತಡೆಯುವುದು, ಅಟ್ಟಿಸಿಕೊಂಡು ಹೋಗುವುದು, ಲಾಠಿಯಲ್ಲಿ ತಡೆಯುವುದು ಮಾಡಬಾರದು.
6. ದಂಡ ವಿಧಿಸುವಾಗ ತನಗಾಗಲಿ/ಸಾರ್ವಜನಿಕರಿಗಾಗಲೀ ಪ್ರಾಣ ಹಾನಿ ಆಗುವಂತೆ ಮಾಡುವಂತಿಲ್ಲ.
7. ಸಾರ್ವಜನಿಕರೊಂದಿಗೆ ವಿಶೇಷವಾಗಿ ಹೆಂಗಸರು, ವೃದ್ಧರು, ಅಪ್ರಾಪ್ತ ಮಕ್ಕಳೊಂದಿಗೆ ಸೌಮ್ಯವಾಗಿ ವರ್ತಿಸುವುದು.
8. ದಂಡ ವಿಧಿಸುವಾಗ ಯಾವುದೇ ಆಮಿಷಕ್ಕೆ ಒಳಗಾಗದೆ ನಿಷ್ಠೆಯಿಂದ ಕೆಲಸ ನಿರ್ವಹಿಸಬೇಕು.
9. ಪ್ರತಿಯೊಬ್ಬ ಸಿಬ್ಬಂದಿಯು ನೋಟ್ ಪುಸ್ತಕ ಬರೆಯುವುದನ್ನು ಕಡ್ಡಾಯ ಮಾಡುವುದು.
10. ದಂಡ ವಿಧಿಸುವಾಗ ಆದಷ್ಟು ಸಿ.ಸಿ.ಟಿ.ವಿ.ಗಳಿರುವ ಸ್ಥಳಗಳನ್ನು ಆಯ್ಕೆ ಮಾಡುವುದು.
11. Digi Locker ಅಥವಾ e-challan, M-Parivahan ಗಳಲ್ಲಿ ತೋರಿಸಿದ ದಾಖಲೆಗಳನ್ನು ಪರಿಗಣಿಸುವುದು.
12. IMV ಕಾಯ್ದೆ ಅನುಗುಣವಾಗಿ ಸಂಚಾರ ನಿಯಮಗಳನ್ನು ಜಾರಿಗೊಳಿಸುವುದು.
13. ಸಾರ್ವಜನಿಕರಿಗೆ ಗೋಚರಿಸುವಂತೆ ನಿಂತು, ದಂಡ ವಿಧಿಸಬೇಕು ಹಾಗೂ ಯಾವುದೇ ಅಪಘಾತ ಅಥವಾ ಅವಘಡ ಸಂಭವಿಸುವುದನ್ನು ತಡೆಯುವುದು.
14. ಪಿ.ಡಿ.ಎ.ಯಂತ್ರವು ಪಿಎಸ್‌ಐ/ಎಎಸ್‌ಐ ಅಧಿಕಾರಿಗಳೊಂದಿಗೆ ಮಾತ್ರ ಇರತಕ್ಕದ್ದು.
15. ಪಾವತಿಯಾದ ದಂಡದ ಮೊತ್ತವನ್ನು ಮರುದಿನ ತಪ್ಪದೇ ಬ್ಯಾಂಕಿಗೆ ಸಂದಾಯ ಮಾಡುವುದು.
16. ವಾಹನಗಳನ್ನು ವಶಕ್ಕೆ ಪಡೆದ ಎರಡು ದಿನಗಳೊಳಗೆ ವಿಲೇವಾರಿ ಮಾಡುವುದು.
17. ಕಾರ್ಯಾಚರಣೆ ಪ್ರಭಾರ ವಹಿಸುವ ಎಲ್ಲಾ ಸಿಬ್ಬಂದಿಗಳು ಪ್ರತಿಫಲಿತ ಜಾಕೆಟ್‌ಗಳನ್ನು (ರಿಫ್ಲೆಕ್ಟೀವ್ ಜಾಕೆಟ್) ಧರಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.ಈ ರೀತಿಯ ಪೊಲೀಸ್ ಸಿಬ್ಬಂದಿಯ ಗೋಚರತೆಯು ಅಪಘಾತಗಳನ್ನು ತಪ್ಪಿಸಲು ಸಹಾಯಕವಾಗುತ್ತದೆ.
18. ಸಮವಸ್ತ್ರದ ಮೇಲೆ ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುವಂತೆ ಹೆಸರಿನ ಫಲಕ ಮತ್ತು ಬಿಲ್ಲೆ ಸಂಖ್ಯೆಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.
19. ಕಾರ್ಯಾಚರಣೆ ವೇಳೆ ಆಂಬ್ಯುಲೆನ್ಸ್ ವಾಹನಗಳಿಗೆ ಹಾಗೂ ತುರ್ತು ಸೇವೆಗಳಲ್ಲಿ ತೊಡಗಿಸಿಕೊಳ್ಳುವಂತ ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ನೋಡಿಕೊಳ್ಳುವುದು.
20. ತಪಾಸಣೆಗೆ ಒಳಪಡಿಸುವ ಚಾಲಕ / ಸವಾರನ ಬಳಿ ಅಧಿಕಾರಿಯು ವಿನಯವಾಗಿ ವರ್ತಿಸಿ ಪೂರ್ವಭಾವಿ ಮಾಹಿತಿ (ಹೆಸರು, ವಿಳಾಸ, ಎಲ್ಲಿಂದ ಬಂದಿರುವ ಮತ್ತು ಎಲ್ಲಿಗೆ ಹೋಗುತ್ತಿರುವ ಬಗ್ಗೆ) ಯನ್ನು ಪಡೆದುಕೊಳ್ಳಬೇಕು.
21. ಪಿ.ಡಿ.ಎ. ಯಂತ್ರದಲ್ಲಿ 2 ಪ್ರಿಂಟ್‌ಗಳ ಪ್ರತಿಗಳನ್ನು ತೆಗೆದು ಒಂದು ಪ್ರತಿಯನ್ನು ಚಾಲಕ/ಸವಾರನಿಗೆ ನೀಡಬೇಕು. ಮತ್ತೊಂದು ಪ್ರತಿಯನ್ನು ಅಧಿಕಾರಿಯು ದಾಖಲೆಗಾಗಿ ಇಟ್ಟುಕೊಳ್ಳಬೇಕು.

22. ವಾಹನವನ್ನು ವಶಕ್ಕೆ ತೆಗೆದುಕೊಳ್ಳುವಾಗ ಅಧಿಕಾರಿಯು ವಾಹನದಲ್ಲಿ ಬೆಲೆ ಬಾಳುವ ವಸ್ತುಗಳಿದ್ದರೆ ಅವುಗಳನ್ನು ಚಾಲಕ/ಸವಾರನ ವಶಕ್ಕೆ ಒಪ್ಪಿಸಬೇಕು.

23. ಕಾರ್ಯಾಚರಣೆ ವೇಳೆ ಅಗತ್ಯ ಬಿದ್ದರೆ ಕಾ ಮತ್ತು ಸು ಪೊಲೀಸರ ಸಹಕಾರವನ್ನು ಪಡೆದುಕೊಳ್ಳಲು ಕಾರ್ಯಾಚರಣೆ ಹಮ್ಮಿಕೊಳ್ಳುವ ಬಗ್ಗೆ ಮುಂಚಿತವಾಗಿಯೇ ವ್ಯಾಪ್ತಿಯ ಕಾ ಮತ್ತು ಸು ಪೊಲೀಸ್ ಠಾಣೆಗೆ ವಿಷಯವನ್ನು ತಿಳಿಸುವುದು ಒಳ್ಳೆಯ ಬೆಳವಣಿಗೆ.

24. ಕಾರ್ಯಾಚರಣೆಯನ್ನು ಸರಾಗವಾಗಿ ಸಮರ್ಥವಾಗಿ ನಡೆಸಬೇಕು. ಕಾರ್ಯಾಚರಣೆ ಸಮಯದಲ್ಲಿ ರಸ್ತೆಯಲ್ಲಿ ಸಂಚರಿಸುವ ಇನ್ನಿತರೆ ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುವುದು.

25. ಯಾವುದೇ ಹಂತದಲ್ಲಿ ಸನ್ನಿವೇಶವನ್ನು ನಿಭಾಯಿಸುವುದು ಅಧಿಕಾರಿಗೆ ಕಷ್ಟಕರವಾಗಿ ಕಂಡುಬಂದಲ್ಲಿ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತಂದು ಅವರ ಮಾರ್ಗದರ್ಶನವನ್ನು ಪಡೆಯುವುದು.

26. ದಾಖಲಿಸಲು ಹಮ್ಮಿಕೊಳ್ಳಲಾಗುವ ಕಾರ್ಯಾಚರಣೆಯನ್ನು ನ್ಯಾಯೋಚಿತ, ಪಾರದರ್ಶಕ ಮತ್ತು ಸರಿಯಾದ ರೀತಿಯಲ್ಲಿ ನಡೆಸಬೇಕು. ಕಾರ್ಯಾಚರಣೆ ವೇಳೆ ಯಾವುದೇ ಪಕ್ಷಪಾತವಾಗಲೀ ಅಥವಾ ತಮ್ಮದೇ ಆದ ಪದ್ಧತಿಯನ್ನು ಅಳವಡಿಸಿಕೊಳ್ಳಬಾರದು. ಎಲ್ಲವೂ ಕಾನೂನು ಬದ್ಧವಾಗಿಯೇ ಇರಬೇಕು.

27. ನಿಯಮ ಜಾರಿ ಮಾಡುವಾಗ ಸಂಚಾರ ವಿಭಾಗದ ಅಧಿಕಾರಿ ಸಿಬ್ಬಂದಿಯವರ ಜೊತೆ ಅನುಚಿತವಾಗಿ ವರ್ತಿಸುವುದು, ಅಸಭ್ಯವಾಗಿ ಮಾತನಾಡುವುದು ಮುಂತಾದ ಅನುಚಿತ ವರ್ತನೆಯ ವಿರುದ್ಧ ಸಂಬಂಧಪಟ್ಟ ಸರಹದ್ದಿನ ಕಾನೂನು ಮತ್ತು ಸುವ್ಯವಸ್ಥೆ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸುವುದು.

(ಡಾ|| ಬಿ.ಆರ್. ರವಿಕಾಂತೇಗೌಡ)
ಜಂಟಿ ಪೊಲೀಸ್ ಆಯುಕ್ತರು
ಸಂಚಾರ, ಬೆಂಗಳೂರು ನಗರ.

ಗೆ,

ಬೆಂಗಳೂರು ನಗರದ ಎಲ್ಲಾ ಸಂಚಾರ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ.

ಪ್ರತಿಗಳನ್ನು:

1. ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ, ಪಶ್ಚಿಮ ಮತ್ತು ಉತ್ತರ ವಿಭಾಗ ಬೆಂಗಳೂರು ನಗರ.
2. ಎಲ್ಲಾ ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪ ವಿಭಾಗಗಳು, ಬೆಂಗಳೂರು ನಗರ.

<u>ಪ್ರತಿಯನ್ನು ಅಭಿನಂದನೆಗಳೊಂದಿಗೆ:</u> ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ಪ್ರಶ್ನೆ ಆ: ಬೆಂಗಳೂರು ನಗರದಲ್ಲಿ ಟ್ರಾಫಿಕ್ ಸಮಸ್ಯೆಗಳನ್ನು ಸುಧಾರಿಸಲು ಸರ್ಕಾರದ ಕ್ರಮವೇನು ? (ವಿವರ ನೀಡುವುದು)

ಉತ್ತರ : ಬೆಂಗಳೂರು ನಗರ ಸಂಚಾರ ವಿಭಾಗವು ವಾಹನ ಸಂಚಾರ ಸಂಚಾರ ಸಮಸ್ಯೆಗಳ ಸುಧಾರಣೆಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ.

➢ <u>ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳು:</u>

ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನ ಸಂಖ್ಯೆಗೆ ಪ್ರಮುಖ ಕಾರಣವಾದ ಆರ್ಥಿಕ ಉದಾರೀಕರಣದ ಪರಿಣಾಮದಿಂದ ಹೊಸ ಬಡಾವಣೆಗಳ ನಿರ್ಮಾಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ, ಮಾಹಿತಿ/ಜೈವಿಕ ತಂತ್ರಜ್ಞಾನ ಸಂಸ್ಥೆಗಳ ಸ್ಥಾಪನೆ ಇವೆಲ್ಲದರ ನೇರ ಪರಿಣಾಮವಾಗಿ ವಾಹನಗಳ ಸಂಚಾರ ಹೆಚ್ಚುತ್ತಲೇ ಇದೆ. ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳಗೊಂಡಿದ್ದರ ಪರಿಣಾಮ ಅನೇಕ ರೀತಿಯಲ್ಲಿ ಸಂಚಾರ ಸಮಸ್ಯೆಗಳು ಅಂದರೆ ಸಂಚಾರದಲ್ಲಿ ದಟ್ಟಣೆ, ಸುಗಮ ಸಂಚಾರಕ್ಕೆ ಅಡ್ಡಿ, ಸಂಚಾರ ಸ್ಥಗಿತಗಳ ಜೊತೆಗೆ ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಘನ ಸರ್ಕಾರವು ಬೆಂಗಳೂರು ನಗರ ಸಂಚಾರ ವ್ಯವಸ್ಥೆ ಸುಧಾರಣೆಗೆ ಹತ್ತು ಹಲವು ವಿನೂತನ ಯೋಜನೆಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳುವ ಸಲುವಾಗಿ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅಡಿ ಇರುವ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಸೇರಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಶ್ರಮ ವಹಿಸುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿನ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಲು ಕೆ.ಆರ್.ಡಿ.ಸಿ.ಎಲ್.ಗೆ ವಹಿಸಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸುವ ಸಲುವಾಗಿ ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡ 12 ಹೆಚ್ಚು ವಾಹನ ದಟ್ಟಣೆ ಕಾರಿಡಾರ್‌ಗಳನ್ನು ಗುರ್ತಿಸಲಾಗಿದೆ.

| | | | |
|---|---|---|---|
| 1. | ಬಳ್ಳಾರಿ ರಸ್ತೆ | – | <u>ಚಾಲುಕ್ಯ ವೃತ್ತದಿಂದ ಹೆಬ್ಬಾಳದ ವರೆಗೆ</u><br>ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ |
| 2 | ಹಳೇ ಮದ್ರಾಸ್ ರಸ್ತೆ | – | <u>ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ</u><br>ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ ಹಾಗೂ<br><u>ಕೆ.ಆರ್. ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ</u><br>ಹೂಡಿ – ಐ.ಟಿ.ಪಿ.ಎಲ್ ಮತ್ತು ಹೋಫ್ ಫಾರಂ ಮಾರ್ಗವಾಗಿ |
| 3 | ಹಳೇ ಏರ್‌ಪೋರ್ಟ್ ರಸ್ತೆ | – | <u>ಎ.ಎಸ್.ಸಿ ಸೆಂಟರ್ ನಿಂದ ಕಾಡುಗೋಡಿ ವರೆಗೆ</u><br>ದೊಮ್ಮಲೂರು – ಮಾರತ್‌ಹಳ್ಳಿ – ಕುಂದಲಹಳ್ಳಿ – ವರ್ತೂರು ಮತ್ತು ಹೋಫ್ ಫಾರಂ ಮಾರ್ಗವಾಗಿ |
| 4 | ಸರ್ಜಾಪುರ ರಸ್ತೆ | – | <u>ಹೊಸೂರು ರಸ್ತೆ ಸೇಂಟ್ ಜಾನ್ಸ್ ಆಸ್ಪತ್ರೆಯಿಂದ ಬಿ.ಬಿ.ಎಂ.ಪಿ ವ್ಯಾಪ್ತಿಯ ಕಾರ್ಮೆಲ್‌ರಾಂ ಬ್ರಿಡ್ಜ್ ವರೆಗೆ</u><br>ಜಕ್ಕಸಂದ್ರ – ಇಬ್ಲೂರು – ಹರಳೂರು ಜಂಕ್ಷನ್ ಮಾರ್ಗವಾಗಿ |
| 5 | ಹೊಸೂರು ರಸ್ತೆ | – | <u>ವೆಲ್ಲಾರ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್ ವರೆಗೆ</u><br>ಆಡುಗೋಡಿ – ಫೋರಂ ಮಾಲ್ ಮತ್ತು ಮಡಿವಾಳ ಮಾರ್ಗವಾಗಿ |
| 6 | ಬನ್ನೇರುಘಟ್ಟ ರಸ್ತೆ | – | <u>ಡೈರಿ ವೃತ್ತದಿಂದ ನೈಸ್ ರಸ್ತೆ ವರೆಗೆ</u><br>ಜಯದೇವ ಫ್ಲೈಓವರ್ – ಜೆ.ಡಿ. ಮರ ಜಂಕ್ಷನ್ – ಬಿಳೇಕಳ್ಳಿ – ಅರಕೆರೆ ಮತ್ತು ಗೊಟ್ಟಿಗೆರೆ ಮಾರ್ಗವಾಗಿ |

(7)

| | | | |
|---|---|---|---|
| 7 | ಕನಕಪುರ ರಸ್ತೆ | – | ಕೆ.ಆರ್. ರಸ್ತೆಯಿಂದ ನೈಸ್ ರಸ್ತೆ ವರೆಗೆ<br>ಬನಶಂಕರಿ – ಸಾರಕ್ಕಿ – ಕೋಣನಕುಂಟೆ ಮಾರ್ಗವಾಗಿ |
| 8 | ಮೈಸೂರು ರಸ್ತೆ | – | ಹಡ್ಸನ್ ವೃತ್ತದಿಂದ ನೈಸ್ ರಸ್ತೆ ವರೆಗೆ<br>ಟೌನ್‌ಹಾಲ್ – ಸ್ಯಾಟಲೈಟ್ ಟೌನ್ – ನಾಯಂಡಹಳ್ಳಿ – ಜ್ಞಾನಭಾರತಿ – ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ & ಕೆಂಗೇರಿ ಸ್ಯಾಟಲೈಟ್ ಟೌನ್ ಮಾರ್ಗವಾಗಿ |
| 9 | ಮಾಗಡಿ ರಸ್ತೆ | – | ಹಳೇ ಬಿನ್ನಿ ಮಿಲ್ ನಿಂದ ನೈಸ್ ರಸ್ತೆ ವರೆಗೆ<br>ಟೋಲ್‌ಗೇಟ್ ಜಂಕ್ಷನ್ – ಜೈಮುನಿರಾವ್ ವೃತ್ತ – ಹೌಸಿಂಗ್ ಬೋರ್ಡ್ – ಕಾಮಾಕ್ಷಿಪಾಳ್ಯ – ಹೊರವರ್ತುಲ ರಸ್ತೆ – ಶ್ರೀಗಂಧಕಾವಲ್ ಸುಂಕದಕಟ್ಟೆ ಮಾರ್ಗವಾಗಿ.<br>ಹಾಗೂ ಅಂಜನ ನಗರ ಔಟರ್ ರಿಂಗ್ ರಸ್ತೆ – ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ನಿಂದ ಮೈಸೂರು ರಸ್ತೆ ವರೆಗೆ<br>ಜಯದೇವ – ಜೆ.ಡಿ. ಮರ ಜಂಕ್ಷನ್ ಮಾರ್ಗವಾಗಿ |
| 10 | ತುಮಕೂರು ರಸ್ತೆ | – | ಓಕಳಿಪುರಂನಿಂದ ಗೊರಗುಂಟೆಪಾಳ್ಯ ವರೆಗೆ<br>ಡಾ|| ರಾಜ್‌ಕುಮಾರ್ ರಸ್ತೆ – ಸೋಪ್ ಫ್ಯಾಕ್ಟರಿ ಜಂಕ್ಷನ್ ಮತ್ತು ಯಶವಂತಪುರ ಮಾರ್ಗವಾಗಿ |
| 11 | ವೆಸ್ಟ್ ಆಫ್ ಕಾರ್ಡ್ ರಸ್ತೆ | – | ಸೋಪ್ ಫ್ಯಾಕ್ಟರಿಯಿಂದ ಮೈಸೂರು ರಸ್ತೆ ವರೆಗೆ<br>ಇಸ್ಕಾನ್ – ರಾಜಾಜಿನಗರ – ಟೋಲ್‌ಗೇಟ್ ಜಂಕ್ಷನ್, ವಿಜಯನಗರ ಮತ್ತು ದೀಪಾಂಜಲಿ ಮಾರ್ಗವಾಗಿ |
| 12 | ಹೊರ ವರ್ತುಲ ರಸ್ತೆ | – | ತುಮಕೂರು ರಸ್ತೆಯಿಂದ ತುಮಕೂರು ರಸ್ತೆ ವರೆಗೆ<br>ಹೆಬ್ಬಾಳ – ಕೆ.ಆರ್.ಪುರಂ – ಮಾರತ್‌ಹಳ್ಳಿ – ಇಬ್ಲೂರು, ಸೆಂಟ್ರಲ್ ಸಿಲ್ಕ್‌ಬೋರ್ಡ್ – ಜೆ.ಡಿ.ಮರ ಜಂಕ್ಷನ್ – ನಾಯಂಡಹಳ್ಳಿ ಜಂಕ್ಷನ್ – ಕೊಟ್ಟಿಗೆಪಾಳ್ಯ ಜಂಕ್ಷನ್ ಮತ್ತು ಗೊರಗುಂಟೆಪಾಳ್ಯ ಮಾರ್ಗವಾಗಿ |

ಈ ಹೈ ಡೆನ್ಸಿಟಿ ಕಾರಿಡಾರ್‌ಗಳಲ್ಲಿ ಸುಗಮ ಸಂಚಾರಕ್ಕೆ ಏನೆಲ್ಲಾ ಅಭಿವೃದ್ಧಿ ಕಾರ್ಯಗಳು ಆಗಬೇಕು ಎಂಬುದರ ಬಗ್ಗೆ ಅಂದರೆ;

- ರಸ್ತೆ ಮೇಲ್ಸೇತುವೆ ನಿರ್ಮಾಣ
- ಗ್ರೇಡ್ ಸೆಪರೇಟರ್/ಫ್ಲೈ ಓವರ್
- ಮಲ್ಟಿ ಲೆವೆಲ್ ಪಾರ್ಕಿಂಗ್
- ರಸ್ತೆ ಅಗಲೀಕರಣ
- ಜಂಕ್ಷನ್‌ಗಳ ಅಭಿವೃದ್ಧಿ
- ಬಾಟಲ್‌ನೆಕ್ ಇರುವ ಸ್ಥಳಗಳ ವಿಸ್ತರಣೆ
- ಸ್ಕೈ ವಾಕ್
- ಬಸ್ ಬೇಸ್
- ಕಣ್ಗಾವಲು, ನಿಯಮ ಜಾರಿ ಕ್ಯಾಮೆರಾಗಳ ಅಳವಡಿಕೆ
- ಸಿಗ್ನಲ್ ಲೈಟ್‌ಗಳ ಅಳವಡಿಕೆ
- ಪಾದಚಾರಿ ರಸ್ತೆಗಳ ಉನ್ನತೀಕರಣ
- ರಸ್ತೆ ಉಬ್ಬರಗಳು ಮತ್ತು ಎತ್ತರಿಸಿದ ಪಾದಚಾರಿ ರಸ್ತೆ ದಾಟು ಅಳವಡಿಕೆ
- ರಸ್ತೆಗಳಿಗೆ ಮೀಡಿಯನ್ ಅಳವಡಿಕೆ
- ಮಳೆ ಬಂದಾಗ ನೀರು ನಿಲ್ಲುವ ಸ್ಥಳಗಳ ದುರಸ್ಥಿ
- ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳ ಮುಚ್ಚುವಿಕೆ ಇತ್ಯಾದಿ

ವಿಸ್ತೃತವಾಗಿ ಮಾಹಿತಿಯನ್ನು ಸಿದ್ಧಪಡಿಸಿದ್ದು ಈಗಾಗಲೇ ಸಂಬಂಧಪಟ್ಟ ಪೌರಸಂಸ್ಥೆಗಳು ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತಿಗೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳೊಂದಿಗೆ ಆಗಿಂದಾಗ್ಗೆ ಸಭೆಗಳನ್ನು ಹಮ್ಮಿಕೊಂಡು ಕಾರ್ಯ ಪ್ರಗತಿಗಳನ್ನು ಪರಿಶೀಲಿಸಲಾಗುತ್ತಿದೆ. (6)

➢ <u>ಸಿ.ಬಿ.ಡಿ ಏರಿಯಾ: (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್)</u>

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಿಧಾನಸೌಧದ ಸುತ್ತ 4 ಚ.ಕಿ.ಮೀ ವ್ಯಾಪ್ತಿಯನ್ನು ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಪ್ರದೇಶವೆಂದು ಈಗಾಗಲೇ ಘೋಷಿಸಲಾಗಿದೆ. ಈ ವ್ಯಾಪ್ತಿಯಲ್ಲಿ ವಿಧಾನಸೌಧ, ವಿಕಾಸಸೌಧ, ಆರ್.ಬಿ.ಐ ಒಳಗೊಂಡಂತೆ ಎತ್ತರದ ಕಟ್ಟಡಗಳು, ಕಾನ್ಸುಲೇಟ್ ಕಛೇರಿಗಳು, ಪ್ರಮುಖ ಹೋಟೆಲ್‌ಗಳು, ಆಸ್ಪತ್ರೆಗಳು, ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು, ಉದ್ಯಾನವನಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಛೇರಿಗಳು, ಕ್ರೀಡಾಂಗಣಗಳು, ಬೆಂಗಳೂರು ಟರ್ಫ್ ಕ್ಲಬ್, ಗಾಲ್ಫ್ ಕ್ಲಬ್ ಇತ್ಯಾದಿಗಳಿರುತ್ತವೆ. ಈ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಪ್ರಾರಂಭದಲ್ಲಿ ನಿರ್ಮಾಣಗೊಂಡ ಸ್ಥಿತಿಯಲ್ಲಿಯೇ ಇದ್ದು ಇವುಗಳ ಅಗಲೀಕರಣದಲ್ಲಿ ಯಾವುದೇ ಬದಲಾವಣೆಯಾಗದೆ ಇರುತ್ತವೆ. ಇವುಗಳು ನಿರ್ಮಾಣಗೊಂಡ ಸಮಯದಲ್ಲಿದ್ದ ನಗರ ಸಂಚಾರವು ವರ್ಷದಿಂದ ವರ್ಷಕ್ಕೆ ದುಪ್ಪಟ್ಟುಗೊಂಡು ಪ್ರಸ್ತುತದ ಸಂಚಾರ ಸಾಂದ್ರತೆಯನ್ನು ತೆಗೆದುಕೊಳ್ಳಲು ಈ ರಸ್ತೆಗಳು ಸಮರ್ಥವಾಗಿರದೆ ಆಗಾಗ್ಗೆ ಸಂಚಾರ ಸ್ಥಗಿತಕೊಳ್ಳಲು ಮತ್ತು ಅಪಘಾತಗಳಿಗೂ ಕಾರಣವಾಗುತ್ತಿದೆ. ಸಿ.ಬಿ.ಡಿ ಪ್ರದೇಶದಲ್ಲಿ ಬರುವ ಪ್ರಮುಖ ರಸ್ತೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

- 100 ಅಡಿ ಒಳವರ್ತುಲ ರಸ್ತೆ: ಅಯ್ಯಪ್ಪ ದೇವಸ್ಥಾನ ಜಂಕ್ಷನ್ ನಿಂದ ಶ್ರೀನಿವಾಗಿಲು ಜಂಕ್ಷನ್ ವರೆಗೆ
- ಹೊಸೂರು ಲಷ್ಕರ್ ರಸ್ತೆ: ವೆಲ್ಲಾರ ಜಂಕ್ಷನ್‌ನಿಂದ ಅಯ್ಯಪ್ಪ ದೇವಸ್ಥಾನ ಜಂಕ್ಷನ್‌ವರೆಗೆ
- ಡಾ॥ ಮರಿಗೌಡ ರಸ್ತೆ: ಬೆಂಗಳೂರು ಡೈರಿ ಜಂಕ್ಷನ್‌ನಿಂದ ಚೆಕ್‌ಪೋಸ್ಟ್ ಜಂಕ್ಷನ್‌ವರೆಗೆ
- ಜಯಮಹಲ್ ರಸ್ತೆ & ನಂದಿ ದುರ್ಗ ರಸ್ತೆ: ಮೇಖ್ರಿ ಸರ್ಕಲ್‌ನಿಂದ ಕಂಟೋನ್‌ಮೆಂಟ್ ರೈಲ್ವೆ ಬ್ರಿಡ್ಜ್ ಮತ್ತು ಜೆ.ಸಿ ನಗರ ಟಿ.ಎಸ್ ಜಂಕ್ಷನ್‌ನಿಂದ ಹಜ್ ಕ್ಯಾಂಪ್ ವರೆಗೆ
- ವಾಟಾಳ್‌ನಾಗರಾಜ್ ರಸ್ತೆ
- ಮಲ್ಲೇಶ್ವರಂ ಮಾರ್ಗೋಸಾ ರಸ್ತೆ
- ಎಂ.ಕೆ.ಕೆ. ರಸ್ತೆ
- ಮಲ್ಲೇಶ್ವರಂ 8 ನೇ ಮುಖ್ಯರಸ್ತೆ
- ಎನ್.ಆರ್.ರಸ್ತೆ : ಬಂಬೂಬಜಾರ್ ಕ್ರಾಸ್‌ನಿಂದ ಮಾರ್ಕೆಟ್ ವೃತ್ತದ ವರೆಗೆ
- ಆರ್.ವಿ.ರಸ್ತೆ-ಜೆ.ಸಿ.ರಸ್ತೆ : ಲಾಲ್‌ಬಾಗ್ ವೆಸ್ಟ್‌ಗೇಟ್ ಜಂಕ್ಷನ್‌ನಿಂದ ನಾಲಾ ಕ್ರಾಸ್ ವರೆಗೆ
- ಆರ್.ವಿ.ರಸ್ತೆ: ಆರ್.ವಿ.ಟೀಚರ್ಸ್ ಕಾಲೇಜ್ ಜಂಕ್ಷನ್‌ನಿಂದ ಲಾಲ್‌ಬಾಗ್ ವೆಸ್ಟ್‌ಗೇಟ್‌ವರೆಗೆ
- ಬಿನ್ನಿಮಿಲ್ ಟ್ಯಾಂಕ್ ಬಂಡ್ ರಸ್ತೆ: ಸಿರ್ಸಿ ಜಂಕ್ಷನ್ ನಿಂದ ಬಿನ್ನಿಮಿಲ್ ರೈಲ್ವೆ ಅಂಡರ್ ಪಾಸ್ ವರೆಗೆ
- ಟಿಸಿಎಂ ರಾಯನ್ ರಸ್ತೆ: ವೆಟರ್‌ನರಿ ಆಸ್ಪತ್ರೆ ಜಂಕ್ಷನ್ ನಿಂದ ಶಾಂತಲಾ ಜಂಕ್ಷನ್ ವರೆಗೆ
- ಎ.ಎಸ್.ಚಾರ್ ರಸ್ತೆ: ಎ.ಎಸ್.ಆರ್.ಸ್ಟ್ರೀಟ್ ಜಂಕ್ಷನ್ ನಿಂದ ಸುಲ್ತಾನ್‌ಪೇಟೆ ಕ್ರಾಸ್ ವರೆಗೆ
- ಜಿಟಿ ರಸ್ತೆ: ಶಾಂತಲಾ ಜಂಕ್ಷನ್ ನಿಂದ ಖೋಡೆ ರೈಲ್ವೆ ಅಂಡರ್ ಪಾಸ್ ವರೆಗೆ
- ಕಾಟನ್‌ಪೇಟೆ ಮುಖ್ಯ ರಸ್ತೆ: ಶಾಂತಲಾ ಜಂಕ್ಷನ್ ನಿಂದ ಬ್ರಿಯಾಂಡ್ ಜಂಕವ್ಷನ್ ವರೆಗೆ

5

- ಎಸ್.ಜೆ.ಪಿ ರಸ್ತೆ: ಕೆ.ಆರ್.ಮಾರ್ಕೆಟ್ ಜಂಕ್ಷನ್‌ನಿಂದ ಜಾಮೀಯಾ ಮಸೀದಿ ಜಂಕ್ಷನ್ ವರೆಗೆ
- ಅವೆನ್ಯೂ ರಸ್ತೆ ರಸ್ತೆ: ಮಾರ್ಕೆಟ್ ವೃತ್ತದಿಂದ ಆಸ್ಪತ್ರೆ ರಸ್ತೆ ಜಂಕ್ಷನ್ ವರೆಗೂ
- ಚಿಕ್ಕಪೇಟೆ ಮುಖ್ಯ ರಸ್ತೆ: ದೊಡ್ಡಪೇಟೆ ಜಂಕ್ಷನ್‌ನಿಂದ ಬಳೇಪೇಟೆ ಜಂಕ್ಷನ್ ವರೆಗೂ
- ಬಿ.ವಿ.ಕೆ ಐಯ್ಯಾಂಗಾರ್ ರಸ್ತೆ: ಅಭಿನಯ ಥಿಯೇಟರ್ ಜಂಕ್ಷನ್ ನಿಂದ ಮಾಮೂಲ್ ಪೇಟ್ ಜಂಕ್ಷನ್ ವರೆಗೆ
- ಹಳೆ ಮೈಸೂರು ರಸ್ತೆ: ಕೆ.ಬಿ ಜಂಕ್ಷನ್ ಬಳಿ ಇಂದ ಲೆಪ್ರಸಿ ಆಸ್ಪತ್ರೆ ಸರ್ಕಲ್ ವರೆಗೆ
- ಡಾ||ರಾಜ್‌ಕುಮಾರ್ ರಸ್ತೆ: ರಾಜಾಜಿನಗರ ಪ್ರವೇಶ ದ್ವಾರದಿಂದ ಪ್ರಸನ್ನ ವೃತ್ತ ಜಂಕ್ಷನ್ ವರೆಗೆ
- ಪ್ಯಾಲೇಸ್ ರಸ್ತೆ: ಮೈಸೂರು ಬ್ಯಾಂಕ್ ಜಂಕ್ಷನ್ ನಿಂದ ಮಹಾರಾಣಿ ಕಾಲೇಜ್ ಬ್ರಿಡ್ಜ್ ಜಂಕ್ಷನ್ ವರೆಗೆ
- ಕೆ.ಜಿ. ರಸ್ತೆ: ಮೈಸೂರು ಬ್ಯಾಂಕ್ ಜಂಕ್ಷನ್ ನಿಂದ ಎಲೈಟ್ ಜಂಕ್ಷನ್ ವರೆಗೆ
- ಟ್ಯಾಂಕ್ ಬಂಡ್ ರಸ್ತೆ: ಉಪ್ಪಾರಪೇಟೆ ಪೊಲೀಸ್ ಠಾಣೆಯಿಂದ ಲಕ್ಷ್ಮಣಪುರಿ ಬ್ರಿಡ್ಜ್ ಜಂಕ್ಷನ್ ವರೆಗೆ
- ಶೇಷಾದ್ರಿ ರಸ್ತೆ: ಲಕ್ಷ್ಮಣಪುರಿ ಬ್ರಿಡ್ಜ್‌ನಿಂದ ಮಹಾರಾಣಿ ಕಾಲೇಜ್ ಬ್ರಿಡ್ಜ್ ಜಂಕ್ಷನ್ ವರೆಗೆ
- ಎಸ್.ಸಿ ರಸ್ತೆ: ಆನಂದ್ ರಾವ್ ಸರ್ಕಲ್ ಜಂಕ್ಷನ್ ನಿಂದ ಹಿಮಾಲಯ ಜಂಕ್ಷನ್ ವರೆಗೆ
- ಗಾಂಧಿನಗರ 5ನೇ ಮುಖ್ಯ ರಸ್ತೆ (ಡಬ್ಲ್ಯೂಹೆಚ್ ಹನುಮಂತಪ್ಪ ರಸ್ತೆ) : ಜನತಾಬಜಾರ್ ಜಂಕ್ಷನ್ ನಿಂದ ಸುಬ್ಬಣ್ಣ ಜಂಕ್ಷನ್ ವರೆಗೆ
- ಕಾಳಿದಾಸ ರಸ್ತೆ: ಫ್ರೀಡಂ ಪಾರ್ಕ್ ಜಂಕ್ಷನ್ ನಿಂದ ಸಾಗರ್ ಜಂಕ್ಷನ್ ವರೆಗೆ
- ವೈ.ರಾಮಚಂದ್ರ ರಸ್ತೆ: ವಿಜಯ ಕೆಫೆ ಜಂಕ್ಷನ್‌ನಿಂದ ಪ್ಯಾಲೇಸ್ ಕ್ರಾಸ್ ಜಂಕ್ಷನ್ ವರೆಗೆ

ಈ ಸಿ.ಬಿ.ಡಿ ಏರಿಯಾಗಳಲ್ಲಿ ಏನೆಲ್ಲಾ ಅಭಿವೃದ್ಧಿ ಕಾರ್ಯಗಳಾಗಬೇಕು ಎಂಬುದರ ಬಗ್ಗೆ ವಿಸ್ತೃತವಾಗಿ ಮಾಹಿತಿಯನ್ನು ಸಿದ್ಧಪಡಿಸಿದ್ದು, ಈಗಾಗಲೇ ಸಂಬಂಧಪಟ್ಟ ಪೌರಸಂಸ್ಥೆಗಳು ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತಿಗೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳೊಂದಿಗೆ ಆಗಿಂದಾಗ್ಗೆ ಸಭೆಗಳನ್ನು ಹಮ್ಮಿಕೊಂಡು ಕಾರ್ಯ ಪ್ರಗತಿಗಳನ್ನು ಪರಿಶೀಲಿಸಲಾಗುತ್ತಿದೆ.

➢ ಸಂಚಾರ ದಟ್ಟಣೆ/ ಸಮಸ್ಯೆಗಳು ಕಂಡುಬರುತ್ತಿರುವ ಸ್ಥಳಗಳಲ್ಲಿ ಪರಿವೀಕ್ಷಣೆ ನಡೆಸಿ ಸುಗಮ ಸಂಚಾರದ ಹಿತದೃಷ್ಟಿಯಿಂದ ನಗರದ ಹಲವಾರು ಸ್ಥಳಗಳಲ್ಲಿ ಬಲ ತಿರುವು ಹಾಗೂ ಯು-ತಿರುವುಗಳನ್ನು ನಿರ್ಬಂಧಿಸಲಾಗಿದೆ.

➢ ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿನ ಹೆಚ್ಚು ಸಂಚಾರ ದಟ್ಟಣೆ ಇರುವ ಪ್ರದೇಶಗಳನ್ನು ಗುರುತಿಸಿ ರಸ್ತೆ ಅಗಲವಿದ್ದು, ಮುಕ್ತ ಎಡ ತಿರುವು ಅಥವಾ ಬಲ ತಿರುವು ಇರುವ ಕಡೆಗಳಲ್ಲಿ ಸಂಚಾರ ಪರಿಕರಗಳನ್ನು (Street Furniture) ಅಳವಡಿಸಿ ಪಥಶಿಸ್ತನ್ನು ಜಾರಿ ಮಾಡಿದ ಕಾರಣ ನಿರೀಕ್ಷೆಗೂ ಮೀರಿ ಅಪಘಾತಗಳ ಸಂಖ್ಯೆಯು ಇಳಿಮುಖವಾಗುವುದಕ್ಕೆ ಕಾರಣವಾಗಿರುತ್ತದೆ ಹಾಗೂ ಸಂಚಾರವೂ ಸಹ ಸುಗಮಗೊಂಡಿರುತ್ತದೆ.

- ಪಿ.ಡಿ.ಎ (ಪರ್ಸನಲ್ ಡಿಜಿಟಲ್ ಅಸಿಸ್ಟೆಂಟ್) ಉಪಕರಣಗಳನ್ನು ಎ.ಎಸ್.ಐ, ಪಿ.ಎಸ್.ಐ ಮತ್ತು ಪಿ.ಐ ಹಂತದವರೆಗಿನ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಇದರ ಮೂಲಕ ಸಂಚಾರ ನಿಯಮಗಳನ್ನು ಉಲ್ಲಂಘಿಸುವ ಚಾಲಕರುಗಳ ವಿರುದ್ಧ ಸ್ಥಳದಲ್ಲೇ ಸಂಚಾರ ಪೊಲೀಸ್ ಅಧಿಕಾರಿಗಳು ಪ್ರಕರಣಗಳನ್ನು ದಾಖಲಿಸಿ ಸ್ಥಳದಂಡವನ್ನು ಪಾವತಿಸಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ.

- ಬೆಂಗಳೂರು ನಗರದ 107 ಪ್ರಮುಖ ರಸ್ತೆಗಳನ್ನು ಗುರುತಿಸಿ ಝೀರೋ ಟಾಲರೆನ್ಸ್ ರಸ್ತೆ ಎಂಬುದಾಗಿ ಜಾರಿ ಮಾಡಲಾಗಿರುತ್ತದೆ ಅಂತಹ ರಸ್ತೆಗಳಲ್ಲಿ ಯಾವುದೇ ರೀತಿಯ ಅನಧಿಕೃತ ವಾಹನ ನಿಲುಗಡೆ, ತಪ್ಪು ವಾಹನ ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳಾಗದಂತೆ ಸಂಚಾರ ಅಧಿಕಾರಿಗಳ ಗಸ್ತುಗಳನ್ನು ಏರ್ಪಡಿಸಲಾಗಿರುತ್ತದೆ.

- ಬೆಂಗಳೂರು ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣೆ ವಾಹನಗಳಿಂದ ಸಂಚಾರ ಸಮಸ್ಯೆಗಳು ಕಂಡು ಬಂದಿದ್ದ ಕಾರಣ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ ಹಾಗೂ ರಾತ್ರಿ 10.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಸಂಚರಿಸುವಂತೆ ಹಾಗೂ ಬೆಳಿಗ್ಗೆ 07.00 ಗಂಟೆಯಿಂದ 11.00 ಗಂಟೆಯವರೆಗೆ ಹಾಗೂ ಸಂಜೆ 04.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

- ಪೀಕ್ ಅವರ್‌ಗಳಲ್ಲಿ ಬೆಂಗಳೂರು ನಗರದ ಎಲ್ಲಾ ಜಂಕ್ಷನ್ ಮತ್ತು ರಸ್ತೆಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತಾರೆ.

- ಪ್ರತಿಯೊಂದು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದೊಂದು ಪ್ರಮುಖ ರಸ್ತೆಗಳನ್ನು ಗುರುತಿಸಿ ಮಾದರಿ ರಸ್ತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ ಹಾಗೂ ಇಂತಹ ಮಾದರಿ ರಸ್ತೆಗಳಲ್ಲಿ ಯಾವುದೇ ರೀತಿಯ ಸಂಚಾರ ಸಮಸ್ಯೆಗಳು ಸಂಭವಿಸದಂತೆ ಹಾಗೂ ರಸ್ತೆ ಸುರಕ್ಷತೆ ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ.

- ಬೆಂಗಳೂರು ನಗರದಾದ್ಯಂತ ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದೆ. ಪ್ರಮುಖ ರಸ್ತೆಗಳಲ್ಲಿ ವಾಹನದ ವೇಗವನ್ನು ನಿಯಂತ್ರಿಸಿ ಅಪಘಾತಗಳನ್ನು ತಡೆಯುವ ಸಲುವಾಗಿ ಹಾಗೂ ಅವಶ್ಯಕವಿರುವ ಸ್ಥಳಗಳಲ್ಲಿ ಮಾತ್ರವೇ ಐ.ಆರ್.ಸಿ ಮಾದರಿಯಲ್ಲಿ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ.

- ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ 3ನೇ ಶನಿವಾರಗಳಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ.

- ಬೆಂಗಳೂರು ನಗರದಲ್ಲಿ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಗಮ ಸಂಚಾರ ಜಾರಿ ಮಾಡಲು ಮತ್ತು ರಸ್ತೆಯಲ್ಲಿ ಸುರಕ್ಷತೆಯನ್ನು ಜಾರಿ ಮಾಡಲು ಹಲವಾರು ಕ್ರಮಗಳನ್ನು, ಆಂದೋಲನಗಳನ್ನು ಹಾಗೂ ವೃತ್ತಿಪರ ಚಾಲಕರುಗಳಿಗೆ ಹಲವಾರು ತರಬೇತಿ ಹಾಗೂ ರಸ್ತೆ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ರಸ್ತೆ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಜಾರಿ ಮಾಡಲಾಗಿದೆ.

(3)

- ಪೀಕ್‌ಅವರ್‌ಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಕಾರಣ ಅಂತಹ ಸಂದರ್ಭದಲ್ಲಿ ಕಣ್ಗಾವಲು ಹಾಗೂ ಡಿಜಿಟಲ್ ಕ್ಯಾಮರಾಗಳ ಮೂಲಕ ಉಲ್ಲಂಘನೆ ಎಸಗುವ ವಾಹನಗಳ ಛಾಯಾಚಿತ್ರವನ್ನು ಸೆರೆಹಿಡಿದು ಅವರುಗಳ ವಿರುದ್ಧ ಐ.ಎಂ.ವಿ 133 ನೋಟೀಸ್‌ಗಳನ್ನು ಕಳುಹಿಸಿ ದಂಡ ಪಾವತಿಸಿಕೊಳ್ಳಲಾಗುತ್ತಿದೆ.

- ನಗರದ ರಸ್ತೆಗಳಲ್ಲಿ ಸಂಚಾರ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿರುವ ವಾಹನಗಳ ಅನಧಿಕೃತ, ತಪ್ಪು ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.

- ಬೆಂಗಳೂರು ನಗರದಾದ್ಯಂತ ಸಮಾನ ವೇಗಮಿತಿಯನ್ನು ಜಾರಿಗೊಳಿಸಲಾಗಿದ್ದು ಅತಿ ವೇಗವಾಗಿ ಚಲಿಸುವವರ ವಿರುದ್ಧವೂ ಸಹ ಕಟ್ಟು ನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ. ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿ ಒಟ್ಟು 13 ಇಂಟರ್‌ಸೆಪ್ಟರ್ ವಾಹನಗಳು ಕಾರ್ಯ ನಿರ್ವಹಿಸುತ್ತಿವೆ.

- ಇದೇ ರೀತಿ ಅಡ್ಡಾ ದಿಡ್ಡಿಯಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ಅಪಾಯಕಾರಿ ಚಾಲನೆ (Dangerous Driving) ಪ್ರಕರಣಗಳನ್ನು ದಾಖಲಿಸುತ್ತಿದೆ.

- ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರನ್ನು ಪತ್ತೆ ಮಾಡಲು ಅತ್ಯಾಧುನಿಕ ಆಲ್ಕೋಮೀಟರ್‌ಗಳನ್ನು ಖರೀದಿಸಲಾಗಿದ್ದು, ಅವುಗಳ ಮೂಲಕ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿರುವವರನ್ನು ಪತ್ತೆ ಮಾಡಲಾಗುತ್ತಿದೆ. ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗವು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡಿರುತ್ತದೆ.

- ಬೆಂಗಳೂರು ನಗರ ರಸ್ತೆಗಳಲ್ಲಿ ಪಥ ಶಿಸ್ತು ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರುಗಳಿಗೆ ಕಠಿಣ ನಿಯಮಗಳ ಜಾರಿಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

- ಡ್ರಾಗ್ ರೇಸಿಂಗ್ ಮತ್ತು ವೀಲಿಂಗ್ ಮತ್ತು ಅಡ್ಡಾದಿಡ್ಡಿ ವಾಹನ ಚಾಲನೆ ಮಾಡುವುದನ್ನು ತಡೆಯಲು ಶಾಲಾ ಕಾಲೇಜು, ವಾಣಿಜ್ಯ ಮಳಿಗೆ ಹಾಗೂ ಪ್ರಮುಖ ಸ್ಥಳಗಳಲ್ಲಿ ಕೋಬ್ರಾ ಹಾಗೂ ಸಂಚಾರ ಪೊಲೀಸರ ಗಸ್ತುಗಳನ್ನು ಏರ್ಪಡಿಸಲಾಗಿದೆ. ವೀಲಿಂಗ್/ಡ್ರ್ಯಾಗ್ ರೇಸ್‌ನಲ್ಲಿ ತೊಡಗಿಸಿಕೊಂಡಿರುವವರ ಐ.ಎಂ.ವಿ. ಹಾಗೂ ಐ.ಪಿ.ಸಿ. ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಲಾಗುತ್ತಿರುತ್ತದೆ.

- ಸಂಚಾರ ನಿರ್ವಹಣಾ ಕೇಂದ್ರವು (ಟಿ.ಎಂ.ಸಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಟಿ.ಎಂ.ಸಿ.ಯಲ್ಲಿ ಅಳವಡಿಸಲಾಗಿರುವ ವಿಡಿಯೋವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. 26 ಕಾರಿಡಾರ್‌ಗಳಲ್ಲಿ ಎರಡು ಪಾಳಿಯಲ್ಲಿ ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್ ಲೈಟ್‌ನ ಸಮಯವನ್ನು ಟಿ.ಎಂ.ಸಿ.ಯಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸ್ ವೆಬ್‌ಸೈಟ್ ಅನ್ನು ಪ್ರತಿನಿತ್ಯ ಸಮಗ್ರ ಮಾಹಿತಿಗಳೊಂದಿಗೆ ಇಲ್ಲಿಯೇ ಅಪ್‌ಡೇಟ್ ಮಾಡಲಾಗುತ್ತಿರುತ್ತದೆ ಹಾಗೂ ನಗರದಲ್ಲಿ ಅಳವಡಿಸಲಾಗಿರುವ ಸಿಗ್ನಲ್ ಲೈಟ್, ವಿ.ಎಂ.ಎಸ್, ಸರ್ವಿಲನ್ಸ್ ಕ್ಯಾಮರಾ ಇನ್ನಿತರೆ ತಾಂತ್ರಿಕ ಉಪಕರಣಗಳ ನಿಯಂತ್ರಣವನ್ನು ಮಾಡಬಹುದಲ್ಲದೆ ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.

- 10 ಜಂಕ್ಷನ್‌ಗಳಲ್ಲಿ ಆರ್.ಎಲ್.ವಿ.ಡಿ (Red Light Violation Detection) ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು ಸಿಗ್ನಲ್ ಜಂಪಿಂಗ್ ಮತ್ತು ಲೇನ್ ಡಿಸಿಪ್ಲಿನ್ ಉಲ್ಲಂಘನೆಗಳನ್ನು ಸ್ವಯಂಚಾಲಿತವಾಗಿ ಗುರ್ತಿಸುವ ಕ್ಷಮತೆಯನ್ನು ಹೊಂದಿರುವ ಸೌಲಭ್ಯವನ್ನು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲು ಬಳಸಿಕೊಳ್ಳಲಾಗುತ್ತಿದೆ.

| ಕ್ರ.ಸಂ | ಸಂಚಾರ ಪೊಲೀಸ್ ಠಾಣೆ | ಕ್ಯಾಮೆರಾ ಅಳವಡಿಸಿರುವ ಜಂಕ್ಷನ್ |
|---|---|---|
| 1 | ಕೆ.ಆರ್. ಪುರಂ ಸಂ.ಪೊ.ಠಾಣೆ | ಕೆ.ಆರ್. ಪುರಂ ಜಂಕ್ಷನ್ |
| 2 | ಕಬ್ಬನ್‌ಪಾರ್ಕ್ ಸಂ.ಪೊ.ಠಾಣೆ | ಎಂ.ಜಿ. ರಸ್ತೆ ಜಂಕ್ಷನ್ |
| 3 | ಯಲಹಂಕ ಸಂ.ಪೊ.ಠಾಣೆ | ಯಲಹಂಕ ಜಂಕ್ಷನ್ |
| 4 | ಅಶೋಕನಗರ ಸಂ.ಪೊ.ಠಾಣೆ | ಈಜಿಪುರ ಜಂಕ್ಷನ್ |
| 5 | ಎಲೆಕ್ಟ್ರಾನಿಕ್ ಸಿಟಿ ಸಂ.ಪೊ.ಠಾಣೆ | ಎಲೆಕ್ಟ್ರಾನಿಕ್ ಸಿಟಿ ಜಂಕ್ಷನ್ |
| 6 | ಹೈಗ್ರೌಂಡ್ಸ್ ಸಂ.ಪೊ.ಠಾಣೆ | ಚಂದ್ರಿಕಾ ಜಂಕ್ಷನ್ |
| 7 | ಆಡುಗೋಡಿ ಸಂ.ಪೊ.ಠಾಣೆ | ಆಡುಗೋಡಿ ಜಂಕ್ಷನ್ |
| 8 | ವಿಲ್ಸನ್‌ಗಾರ್ಡನ್ ಸಂ.ಪೊ.ಠಾಣೆ | ಶಾಂತಿನಗರ ಜಂಕ್ಷನ್ |
| 9 | ಹಲಸೂರು ಸಂ.ಪೊ.ಠಾಣೆ | ವಿ.ಎಸ್.ಸಿ ಜಂಕ್ಷನ್ |
| 10 | ಬ್ಯಾಟರಾಯನಪುರ ಸಂ.ಪೊ.ಠಾಣೆ | ಪಿ.ಇ.ಎಸ್.ಐ.ಟಿ ಜಂಕ್ಷನ್ |

- ನಗರದ ಸಂಚಾರ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಬಾಡಿವಾರ್ನ್ ಕ್ಯಾಮೆರಾಗಳನ್ನು ವಿತರಿಸಲಾಗಿದ್ದು ಇದರಿಂದಾಗಿ ಪರಿಣಾಮಕಾರಿಯಾಗಿ ನಿಯಮ ಜಾರಿಗೊಳಿಸಲು ಸಾಧ್ಯವಾಗುತ್ತಿದೆ.

- ಸಾರ್ವಜನಿಕರನ್ನು ಸಹ ಪರಿಣಾಮಕಾರಿಯಾಗಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸುವ ನಿಟ್ಟಿನಲ್ಲಿ ಬಳಸಿಕೊಳ್ಳಲಾಗುತ್ತಿದ್ದು ಪಬ್ಲಿಕ್ ಐ, ಐ ಚೇಂಜ್ ಮೈ ಸಿಟಿ ಆ್ಯಪ್‌ಗಳ ಜೊತೆಗೆ ಫೇಸ್‌ಬುಕ್, ಜಿ-ಮೇಲ್ ನಂತಹ ಸಾಮಾಜಿಕ ಜಾಲತಾಣವನ್ನು ಸಹ ಬಳಸಿಕೊಳ್ಳಲಾಗುತ್ತಿದೆ.

- ಜಂಕ್ಷನ್‌ಗಳಲ್ಲಿ ಸಿಗ್ನಲ್ ಜಂಪಿಂಗ್ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.

- ಸಂಚಾರ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ ಇದ್ದುದರಿಂದ ಸರ್ಕಾರದ ಮಂಜೂರಾತಿ ಪಡೆದು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತಿದೆ.

- ಬೆಂಗಳೂರು ನಗರ ಸಂಚಾರ ವಾರ್ಡನ್ ಸಂಸ್ಥೆ ಇದ್ದು, ಸಂಚಾರ ವಾರ್ಡನ್‌ಗಳನ್ನು ಸಹ ಸಂಚಾರ ನಿಯಂತ್ರಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

- ಸಾರ್ವಜನಿಕರಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ಶಾಲಾ ಮತ್ತು ವಿಭಾಗೀಯವಾಗಿ ಹಲವಾರು ಕಡೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಿ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

- ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ದೈನಂದಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ಹಾಗೂ ಛಾಯಾ ಚಿತ್ರಗಳನ್ನು ಮುದ್ರಿಸಿ ಮತ್ತು ಆಂದೋಲನಗಳ ಮುಖೇನ ಪಥ ಶಿಸ್ತು ಪಾಲನೆಯ ಗುರಿ ಮತ್ತು ಉದ್ದೇಶಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲಾಗುತ್ತಿದೆ.

- ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರತಿ ದಿನ ವಿದ್ಯಾರ್ಥಿಗಳು, ಪೋಷಕರು, ಆಟೋ ರಿಕ್ಷಾ, ಕೆ.ಎಸ್.ಆರ್.ಟಿ.ಸಿ., ಬಿ.ಎಂ.ಟಿ.ಸಿ. ಮತ್ತು ಕ್ಯಾಬ್ ಚಾಲಕರುಗಳು ವೀಕ್ಷಣೆಗೆ ಬರುತ್ತಿದ್ದು, ಅವರುಗಳಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ವಿಡಿಯೋ ತುಣುಕುಗಳನ್ನು ತೋರಿಸುವುದರ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

- ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ.

***